**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ**

**ಸಿ.ಸಿ.105/2023**

| | | | | |
|---|---|---|---|---|
| 01 | ಹೆಸರು | ದೀಪಿಕ | ಸಿ ಡಬ್ಲೂ | 3 |
| 02 | ಗಂಡನ ಹೆಸರು | ರವೀಶ | ಪಿಡಬ್ಲೂ | 3 |
| 03 | ವಯಸ್ಸು | 33 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಗೃಹಿಣಿ | 22.04.2026 | |
| 05 | ಊರು | ಬೆಂಡರವಾಡಿ ಗ್ರಾಮ | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಚಾ ಸಾ 1 ನನ್ನ ಗಂಡ ಇರುತ್ತಾರೆ. ಚಾ ಸಾ 2, 4 ಮತ್ತು 5 ರವರ ಪರಿಚಯ ಇರುತ್ತದೆ. ಆರೋಪಿ ನನ್ನ ಬಾವ ಇರುತ್ತಾರೆ. ಚಾ ಸಾ 1 ರವರು ಆರೋಪಿಯ ವಿರುದ್ಧ ಉದ್ದೇಶಪೂರ್ವಕವಾಗಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಚಾ ಸಾ 2 ರವರಿಗೆ ಆರೋಪಿ ಯಾವುದೇ ರೀತಿಯ ತಡೆಯನ್ನುಂಟು ಮಾಡಿರುವುದಿಲ್ಲ, ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನನ್ನ ಗಂಡನ ಮನೆಯವರಿಗೂ ಮತ್ತು ನನ್ನ ತವರು ಮನೆಯವರಿಗೂ ಈ ಹಿಂದೆ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಹಾಗಾಗಿ ನಾನು ನನ್ನ ಅಕ್ಕನ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಃ11.05.2022 ರಂದು ನನ್ನ ಅಕ್ಕನಿಗೆ ಹುಷಾರಿಲ್ಲವೆಂದು ತಿಳಿದು ಮಾದಿಗಹಳ್ಳಿ ಯಲ್ಲಿರುವ ನನ್ನ ಅಕ್ಕನನ್ನು ನೋಡಲು ನನ್ನನ್ನು ಬಂದು ಕರೆದುಕೊಂಡುಹೋಗುವಂತೆ ನಾನು ನನ್ನ ಬಾವನಾದ ಆರೋಪಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ನನ್ನ ಬಾವ ನಂಜಾಪುರ ಗ್ರಾಮದ ಚಾನಲ್ ಬಳಿ ನನ್ನನ್ನು ಬರುವಂತೆ ತಿಳಿಸಿದ್ದು ನಾನು ಯಾರಿಗೂ ಹೇಳದೇ ಅಲ್ಲಿಗೆ ಹೋಗುತ್ತಿದ್ದುದ್ದನ್ನು ಚಾ ಸಾ 2 ರವರು

ನೋಡಿ ನನ್ನನ್ನು ಹಿಂಬಾಲಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆಗ ಸಮಯ ಸಂಜೆ 5.40 ಗಂಟೆ ಆಗಿದ್ದು, ಅಲ್ಲಿ ನನ್ನ ಬಾವ ಮೋಟಾರ್ ಸೈಕಲ್ ನಲ್ಲಿ ನಿಂತಿದ್ದು ನಾನು ಮೋಟಾರ್ ಸೈಕಲ್ ಅನ್ನು ಹತ್ತಿಕೊಳ್ಳುವಾಗ ತಡೆಯಲು ಬಂದ ಚಾ ಸಾ 2 ರವರಿಗೆ ಆರೋಪಿ ಕಾಲಿನಿಂದ ಒದ್ದು ಕೆಳಗೆ ಬೀಳಿಸಿ ಮೈಕೈಗೆ ಕೈಗಳಿಂದ ಹಲ್ಲೆ ಮಾಡಿ ಮುಂದೆ ಹೋಗಲು ಬಿಡದೇ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾ ಸಾ 4 ಮತ್ತು 5 ರವರು ಜಗಳ ಬಿಡಿಸಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ಮೋಟಾರ್ ಸೈಕಲ್ ನಲ್ಲಿ ಹೊರಟುಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ನಿರಾಕರಿಸಿದ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು. ನಾನು ನಿ ಪಿ 3 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿದಿರುತ್ತಾರೆ.**

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.